**<u>ದಿ : 11-07-2022 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎನ್.ವಿ.ಆರ್ ವಕೀಲರಿಂದ</u> :**

ನಾನು ಮತ್ತು ನನ್ನ ತಾಯಿ ಪೋಲೀಸ್ ಅಧಿಕಾರಿಗಳು ತನಿಖೆ ಮಾಡಿದ ದಾಖಲೆಗಳ ಆಧಾರದ ಮೇಲೆ ಮತ್ತು ನಾನು ನೀಡಿದ ದೂರಿನ ಆಧಾರದ ಮೇಲೆ ಪರಿಹಾರವನ್ನು ಕೇಳುತ್ತಿದ್ದೆವು. ನಾನು ದೂರನ್ನು ಕೊಟ್ಟ ದಿನವೇ ಪೋಲೀಸರಿಗೆ ಅಪಘಾತ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 01-01-2020 ರ ನಂತರ ಮತ್ತೊಂದು ಬಾರಿ ಪೋಲೀಸ್ ಠಾಣೆಗೆ ಹೋಗಿರುತ್ತೇನೆ, ಆದರೆ ಯಾವ ದಿನ ಎಂದು ನನಗೆ ನೆನಪಿಲ್ಲ. ನಾನು ಪೋಲೀಸರಿಗೆ ಮತ್ತೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನನ್ನ ತಂದೆಯು ರಸ್ತೆಯನ್ನು ದಾಟುತ್ತಿರುವಾಗ ಅಪಘಾತವಾಗಿದೆ ಎಂದು ದೂರಿನಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ.

2) ನಾನು ಮತ್ತು ನನ್ನ ತಂದೆ ಒಂದು ಎಟಿಎಂ ಬಳಿ ನಿಂತಿದ್ದಾಗ ಅಪಘಾತವಾಗಿರುತ್ತದೆ ಎಂದರೆ ಸರಿ. ನಾನು ಆ ತರಹ ಎಟಿಎಂ ಬಳಿ ನಿಂತಾಗ ಅಪಘಾತವಾಗಿದೆ ಎಂದು ತೋರಿಸಲು ಯಾವುದೇ ದಾಖಲೆಗಳಿಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಕಾರಣ ನನ್ನ ಹೇಳಿಕೆಯನ್ನು ಬದಲಾಯಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯೇ ರಸ್ತೆಯನ್ನು ದಾಟುವಾಗ ಅವಸರ ಮಾಡಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮೋಟಾರು ವಾಹನ ಸವಾರ ತಪ್ಪಿತಸ್ಥ ಅಲ್ಲ ಎಂದರೆ ಸರಿಯಲ್ಲ. ಮೋಟಾರು ವಾಹನ ಚಾಲಕ ಕೇವಲ ಕಲಿಕೆ ಪರವಾನಗಿ ಹೊಂದಿದ್ದ ಎಂದು ನನಗೆ ತಿಳಿದಿದೆ. ನನ್ನ ದೂರಿನ ಪ್ರಕಾರ ಮೋಟಾರು ವಾಹನ ಚಾಲಕ ಒಬ್ಬನೇ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ನಮಗೆ ಪರಿಹಾರ ಸಿಗುವ ಉದ್ದೇಶದಿಂದ ಮೋಟಾರು ವಾಹನ ಚಾಲಕನ ತಂದೆಯು ಸಹ ಮೋಟಾರ್ ವಾಹನದಲ್ಲಿ ಕುಳಿತಿದ್ದ ಎಂದು ದಾಖಲೆ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮೋಟಾರ್ ವಾಹನ ಸವಾರ ಮತ್ತು ಹಿಂಬದಿ ಸವಾರ ಗಾಯಗೊಂಡ ಬಗ್ಗೆ ನನಗೆ ಗೊತ್ತಿಲ್ಲ. ಹಿಂಬದಿ ಸವಾರ ಇರಲಿಲ್ಲ ಹಾಗಾಗಿ ಅವನಿಗೆ ಪೆಟ್ಟಾಗಿಲ್ಲ ಎಂದರೆ ಸರಿಯಲ್ಲ. ಎದುರುದಾರರ ವಿಮಾ ಕಂಪನಿಯವರು ಚಾಲಕನಿಗೆ ಯಾವುದೇ ಪರಿಣಾಮಕಾರಿ ಪರವಾನಗಿ ಇಲ್ಲದ ಕಾರಣ ಮತ್ತು ನನ್ನ ತಂದೆಯ ನಿರ್ಲಕ್ಷ್ಯತನದಿಂದ ಅಪಘಾತವಾದ ಕಾರಣ ಪರಿಹಾರ ಮೊತ್ತವನ್ನು ಪಾವತಿಸಲು ಭಾದ್ಯರಲ್ಲ ಎಂದರೆ ಸರಿಯಲ್ಲ.

3) ನಾನು ಮತ್ತು ನನ್ನ ತಾಯಿ ಬಾಂಬೆಯಲ್ಲಿ ವಾಸವಿದ್ದೇವೆ ಎಂದರೆ ಸಾಕ್ಷಿಯು ನಾನು ಮಾತ್ರ ಬಾಂಬೆಯಲ್ಲಿ ವಾಸವಿದ್ದೇನೆ ಎನ್ನುತ್ತಾರೆ. ವಿದೇಶದವರಿಗೆ ಮೂರು ವರ್ಷಗಳು ಮಾತ್ರ ಉಳಿದುಕೊಳ್ಳಲು ಅವಕಾಶ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೊಯಿಟ್ ದೇಶದಲ್ಲಿ ಕಂಪನಿಗಳು ಕೂಡ ಕೆಲಸಗಾರರನ್ನು ಒಂದು ರಿಂದ ಮೂರು ವರ್ಷಗಳ ಕಾಲ ಮಾತ್ರ ಉದ್ಯೋಗಕ್ಕೆ

ನೇಮಿಸಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಯಾವುದೇ ಕೆಲಸಗಾರರಿಗೆ ಖಾಯಂ ಉದ್ಯೋಗ್ಯ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಕೆಲಸ ಮಾಡಿದರೆ ಮಾತ್ರ ಸಂಬಳ ಪಾವತಿಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅಲ್ಲಿನ ಪದ್ಧತಿಯ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯು ಕೊಯಿಟ್‌ಯಲ್ಲಿ ಬಾಡಿಗೆ ಕರಾರು ಮಾಡಿಕೊಂಡು ವಾಸವಿದ್ದರು ಎಂದು ತೋರಿಸಲು ದಾಖಲೆ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. 2011 ರಿಂದ 2020 ರವರೆಗೆ ನನ್ನ ತಂದೆ ಆರು ಬಾರಿ ಬೇರೆ ಬೇರೆ ಉದ್ಯೋಗದ ಆದೇಶದ ಮೇಲೆ ಕೊಯಿಟ್ ಗೆ ಹೋಗಿದ್ದಾರೆ ಎಂದರೆ ಸಾಕ್ಷಿಯು ಒಂದೇ ಉದ್ಯೋಗದ ಆದೇಶದ ಮೇಲೆ ಹೋಗಿದ್ದಾರೆ ಎನ್ನುತ್ತಾರೆ. ಹಾಗೆಯೇ ಕೊಯಿಟ್ ರಾಯಭಾರಿ ಕಚೇರಿಯ ಮಾರ್ಗಸೂಚಿಯಂತೆ ಎರಡು ವರ್ಷಗಳಿಗೊಮ್ಮೆ ವಾಸಕ್ಕೆ ಅನುಮತಿ ನೀಡುತ್ತಾರೆ ಎಂದರೆ ಸರಿ.

4) ನಿ.ಪಿ - 19 ರ ಪ್ರಕಾರ ದಿನಾಂಕ 28-10-2019 ಮತ್ತು 21-10-2019 ರಂದು ಎರಡು ಸಂದರ್ಭದಲ್ಲಿ ಮಾತ್ರ ಕೇವಲ 800 ಕೆ.ಡಿ ಸಂಬಳ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ದಿನಾಂಕ 28-10-2019 ರ ಮೊದಲು ನನ್ನ ತಂದೆಗೆ ಸಂಬಳ ತೆಗೆದುಕೊಂಡ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ - 15 ರ ಪ್ರಕಾರ ನನ್ನ ತಂದೆಯು ಮಾರಾಟ ಪ್ರತಿನಿಧಿ ಆಗಿದ್ದರು ಎಂದರೆ ಸರಿಯಲ್ಲ. ನಿ.ಪಿ - 19 ರಲ್ಲಿ ಹೆಲ್ತ್ ಪ್ಲೇನೇಟ್ ಕಂಪನಿಯವರು ಸಂಬಳ ಪಾವತಿಸಿದ್ದಾರೆ ಎಂದು ತೋರಿಸಲಿಲ್ಲ ಎಂದರೆ ಸಾಕ್ಷಿಯು ಆ ಕಂಪನಿಯ ಪಾವತಿಸಿರುತ್ತದೆ ಎನ್ನುತ್ತಾರೆ.

5) ನಿ.ಪಿ - 16 ರಿಂದ 18 ಕಂಪನಿಯ ಕಾಗದ ಪತ್ರಗಳು ಎಂದರೆ ಸರಿ. ಸದರಿ ದಾಖಲೆಗಳನ್ನು ಚಿಕ್ಕಪ್ಪನ ಕಡೆಯಿಂದ ತರಿಸಿಕೊಂಡಿರುತ್ತೇನೆ. ನನ್ನ ಚಿಕ್ಕಪ್ಪ ಯಾವ ಬಗೆಯಲ್ಲಿ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ನಮ್ಮ ಪರಿಹಾರ ಪಡೆಯುವ ಉದ್ದೇಶದಿಂದ ಇತ್ತಿಚೇಗೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ - 16 ಸಂಬಳದ ಬಗ್ಗೆಯಾಗಲಿ, ಹುದ್ದೆ ಬಗ್ಗೆಯಾಗಲಿ, ನೇಮಕಾತಿಯ ಬಗ್ಗೆಯಾಗಲಿ ಅಧಿಕೃತ ದಾಖಲೆ ಅಲ್ಲ ಎಂದರೆ ಸರಿಯಲ್ಲ.

6) ಕೊಯಿಟ್ ಯಲ್ಲಿ ಯಾವುದೇ ಹುದ್ದೆಯನ್ನು ವಿದೇಶಿಗರಿಗೆ ನೀಡಿದ್ದಲ್ಲಿ ಅಲ್ಲಿನ ಕಾರ್ಮಿಕ ಮತ್ತು ಸಮಾಜ ಕಲ್ಯಾಣ ಸಚಿವಾಲಯಕ್ಕೆ ಕಳುಹಿಸಿ ಅನುಮೋದನೆ ಪಡೆಯಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಇಲಾಖೆಗಳು ಉದ್ಯೋಗದ ಆದೇಶಕ್ಕೆ ಮೊಹರು ಮತ್ತು ಸಹಿಯನ್ನು ಹಾಕಿ ಸಂಬಂಧಿಸಿದ ಕಂಪನಿಗೆ ಕೊಡುತ್ತಾರೆ ಎಂದರೆ ಗೊತ್ತಿಲ್ಲ. ಆ ಬಗೆಯಲ್ಲಿ ನನ್ನ ತಂದೆಯನ್ನು ನೇಮಕಾತಿ ಮಾಡಿಕೊಂಡ ಬಗ್ಗೆ ಸಂಬಂಧಪಟ್ಟ ದಾಖಲೆಯನ್ನು ಹಾಜರುಪಡಿಸಲು ಸಾಧ್ಯವಿದೆಯೇ ಎಂದರೆ ಸಾಕ್ಷಿಯು ಈಗ ನೀಡಿದ ದಾಖಲೆಯೇ ನನ್ನ ತಂದೆಗೆ ಉದ್ಯೋಗ ನೀಡಿದ ದಾಖಲೆ ಆಗಿರುತ್ತದೆ ಎನ್ನುತ್ತಾರೆ. 2018 ರಲ್ಲಿ ನನ್ನ ತಂದೆಗೆ ಕಂಪನಿಯವರು ನೀಡಿದ ಕೆಲಸದ ಆದೇಶವನ್ನು ಮೇಲ್ಕಂಡ

ಇಲಾಖೆಯಿಂದ ಅನುಮೋದಿಸಲ್ಪಟ್ಟಿರುವುದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಿದೆಯೇ ಎಂದರೆ ಸಾಕ್ಷಿಯು ಮಾಲೀಕರು ಕೊಟ್ಟರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನನ್ನ ತಂದೆಯ ಸ್ನೇಹಿತರ ಮೂಲಕ ಸದರಿ ದಾಖಲೆಗಳನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

17) ನಿ.ಪಿ - 15 ರಿಂದ 18 ರಲ್ಲಿ ನನ್ನ ತಂದೆಯ ಉದ್ಯೋಗವನ್ನು ಬೇರೆ ಬೇರೆ ತೋರಿಸಿದ್ದರಿಂದ ನನ್ನ ತಂದೆ ಸಾಮಾನ್ಯ ಕೆಲಸಗಾರರಾಗಿದ್ದರು ಎಂದು ಸೂಚಿಸಿದರೆ ಸರಿಯಲ್ಲ. ನಮ್ಮ ತಂದೆಗೆ ಮರಣದ ಸಂಬಂಧ ಯಾವುದೇ ಸವಲತ್ತನ್ನು ಕಂಪನಿ ಭರಿಸಿಲ್ಲ. ನನ್ನ ತಂದೆ ತಾತ್ಕಾಲಿಕ ಉದ್ಯೋಗಿಯಾದ ಕಾರಣ ಯಾವುದೇ ಸವಲತ್ತು ಸಿಗಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನೇರವಾಗಿ ಹೆಲ್ತ್ ಪ್ಲಾನೆಟ್ ಕಂಪನಿಯವರು ಸಂಬಳ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನಿ.ಪಿ - 19 ರ ಪ್ರಕಾರ ಬೇರೆ ಬೇರೆ ಕಂಪನಿಗಳಿಂದ ಮತ್ತು ಬೇರೆ ಬೇರೆ ಸಾಮಾಗ್ರಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ - 19 ನನ್ನ ತಂದೆಯ ಸ್ವಂತ ಲೆಕ್ಕಖಾತೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ಪ್ರಕಾರ ನನ್ನ ತಂದೆ ಖಾಸಗಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ.

18) ನನ್ನ ತಂದೆ ಯಾವ ವಿದ್ಯಾಭ್ಯಾಸ ಅರ್ಹತೆ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಕೇವಲ ಹತ್ತನೇ ತರಗತಿ ಅಥವಾ ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ವಿದ್ಯಾಭ್ಯಾಸದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿದೆ. ಬಡವರು, ಭಾರತದಲ್ಲಿ ಉದ್ಯೋಗದಲ್ಲಿ ಸಿಗದವರು, ಅನರ್ಹರು ವಿದೇಶದಲ್ಲಿ ಹೋಗುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ಭಾರತದಲ್ಲಿ ಯಾವುದೇ ಕಂಪನಿಯಲ್ಲಿ ಕೆಲಸ ಮಾಡಿದ್ದಾರೆ ಕೇವಲ ಹದಿನೈದು ಸಾವಿರ ಸಿಗುತ್ತಿತ್ತು ಎಂದರೆ ಸರಿಯಲ್ಲ. ಕೊಯಿಟ್ ಯವರಿಗೆ ಒಂದು ದಿನಾರ್ ಎಂದರೆ ಒಂದು ರೂಪಾಯಿ ಬೆಲೆ ಎಂದರೆ ಸಾಕ್ಷಿಯು ಭಾರತದ 258 ರೂಪಾಯಿಗಳಿಗೆ ಸಮವಾಗಿರುತ್ತದೆ ಎಂದು ಹೇಳುತ್ತಾರೆ. ಒಂದು ದಿನಾರ್ ಗಿಂತ ಕಡಿಮೆ ಎಂದರೆ ಅರ್ಧ ಕೆ.ಡಿ ಇದೆ ಎನ್ನುತ್ತಾರೆ. ಭಾರತದಲ್ಲಿ ಜೀವನ ಸಾಗಿಸಲು ಖರ್ಚು ವೆಚ್ಚಗಳು ಕಡಿಮೆ ಎಂದರೆ ಸರಿಯಲ್ಲ. ಕೊಯಿಟ್ ಅಲ್ಲಿ ಜೀವನ ವೆಚ್ಚ ದುಬಾರಿಯಾಗಿದ್ದು, ಹೆಚ್ಚಿನ ಸಂಬಳ ನೀಡುತ್ತಾರೆ ಎಂದರೆ ಸರಿಯಲ್ಲ. ಕೊಯಿಟ್ ನಲ್ಲಿ 400 ಚದರ ಅಡಿ ಮನೆಗೆ 65,000 ರೂ ಬಾಡಿಗೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

19) ನಾವು ಕೊಯಿಟ್ ಜೀವನ ವೆಚ್ಚದ ಮತ್ತು ಸಂಬಳದ ಪ್ರಕಾರ ಪರಿಹಾರಕ್ಕೆ ಅರ್ಹರಲ್ಲ, ಭಾರತದಲ್ಲಿ ಅನ್ವಯವಾಗುವ ಸಂಬಳ ವೇತನಕ್ಕೆ ಸರಿಯಾಗಿ ಪರಿಹಾರ ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಅಪಘಾತದ ನಂತರ ಖಾಸಗಿ ವಾಹನವನ್ನು ತಡೆದು ಅದರಲ್ಲಿ ನನ್ನ ತಂದೆಯನ್ನು ಆಸ್ಪತ್ರೆಗೆ ಸಾಗಿಸಿರುತ್ತೇವೆ ಎಂದರೆ ಸರಿ. ಯಾವುದೇ ಬಾಡಿಗೆ ವಾಹನವನ್ನು ಪಡೆದುಕೊಂಡಿರುವುದಿಲ್ಲ ಎಂದರೆ

ಸರಿ. ಶವಸಂಸ್ಕಾರ ವಿಧಿವಿಧಾನಗಳನ್ನು ಗೋವಾದಲ್ಲಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕುಂದಾಪುರದಲ್ಲಿ ಶವಸಂಸ್ಕಾರವನ್ನು ಮಾಡಿದ ಬಗ್ಗೆ ದಾಖಲೆಗಳಿರುತ್ತವೆ.

20) ಆಸ್ಪತ್ರೆಯಲ್ಲಿದ್ದಾಗ ಪ್ರಜ್ಞೆ ಇರಲಿಲ್ಲ. ನನ್ನ ತಂದೆಯನ್ನು ಗೋವಾದಲ್ಲಿ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದೆವು ಎಂದರೆ ಸರಿ. ಉಚಿತ ಚಿಕಿತ್ಸೆ ಮತ್ತು ಔಷಧಿ ನೀಡಿದ್ದಾರೆ ಎಂದರೆ ಸರಿಯಲ್ಲ. ಎರಡು ಲಕ್ಷ ವೈದ್ಯಕೀಯ ವೆಚ್ಚ ಮಾಡಿ ಬಗ್ಗೆ ದಾಖಲೆ ಇಲ್ಲ. ನಾನು ಕೇಳಿರುವಷ್ಟು ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ
ಅಪಘಾತ ಪರಿಹಾರ ಮಂಡಳಿ, ಕುಂದಾಪುರ**